# ನಾಗರಾಣಿ!





ಚಿಕ್ಕ ಮಕ್ಕಳು ಪ್ಲಾಸ್ಟಿಕ್ ಹಾವನ್ನು ಕಂಡರೆ ಮಾರುದ್ದ ಓಡುತ್ತಾರೆ. ಆದರೆ ಈ ಚಿತ್ರದಲ್ಲಿರುವ ಪೋರಿಯನ್ನೊಮ್ಮೆ ನೋಡಿ. ಜೀವ ಇರುವ ನಾಗರಹಾವನ್ನು ಮಾಲೆಯಂತೆ ಸುತ್ತಿಕೊಂಡು ಊರೆಲ್ಲ ಸುತ್ತುತ್ತಾಳೆ. ಈಕೆ ಹಾವನ್ನು ಹಿಡಿದು ರಸ್ತೆಯಲ್ಲಿ ಬರುತ್ತಿದ್ದರೆ ಊರಿನವರೆಲ್ಲ ಭಯಭೀತರಾಗಿ ದೂರ ಸರಿಯುತ್ತಾರಂತೆ. ಎಂಟು ವರ್ಷದ ಈ ಬಾಲೆಯ ಹೆಸರು ಕಾಜೋಲ್ ಖಾನ್.

ಉತ್ತರ ಪ್ರದೇಶದ ಘಾತಮ್‌ಪುರ್ ಎಂಬ ಪುಟ್ಟ ಹಳ್ಳಿ ಈಕೆಯ ಊರು. ಅಪ್ಪ, ಅಮ್ಮ, ಆರು ಜನ ಸಹೋದರಿಯರು, ಇಬ್ಬರು ಸಹೋದರರು ಮತ್ತು ನಾಗರಹಾವುಗಳೊಂದಿಗೆ ಈಕೆಯ ವಾಸ. ಕಾಜೋಲ್ ತಂದೆ ತಾಜ್ ಮೊಹಮ್ಮದ್‌ಗೆ ಹಾವುಗಳನ್ನು ಹಿಡಿಯುವುದೇ ಕಾಯಕ. ಚಿಕ್ಕಂದಿನಿಂದಲೂ ಹಾವಿನೊಟ್ಟಿಗೆ ಒಡನಾಟ ಇಟ್ಟುಕೊಂಡಿರುವ ಇವಳಿಗೆ ಅವುಗಳನ್ನು ಕಂಡರೆ ಬಲು ಪ್ರೀತಿ. ಸದಾ ಹಾವುಗಳನ್ನು ಇರಿಸಿಕೊಳ್ಳುವುದರಿಂದ ಓರಿಗೆಯ ಮಕ್ಕಳು ಈಕೆಯ ಹತ್ತಿರ ಸುಳಿಯುವುದಿಲ್ಲ. ಹಾಗಾಗಿ ಉರಗಗಳೇ ಈಕೆಯ ಆತ್ಮೀಯ ಗೆಳೆಯರು. ಅವುಗಳೊಂದಿಗೆ ಈಕೆಯ ಆಟ, ಊಟ, ಮುದ್ದಾಟ ಎಲ್ಲವೂ. ಹಾವುಗಳೊಂದಿಗೆ ಹುಡುಗಾಟ ಮಾಡುವುದು, ಅವುಗಳನ್ನು ಕೆಣಕುವುದೆಂದರೆ ಈಕೆಗೆ ಬಲು ಪ್ರೀತಿ. ಹಾವಿನೊಂದಿಗೆ ಸರಸವಾಡಿದರೆ ಅದು ಸುಮ್ಮನಿರುತ್ತದೆಯೇ? 'ಹೊಟ್ಟೆಗೆ, ಕೆನ್ನೆಗೆ ಮತ್ತು ಕೈಯ ಬಳಿ ಹೀಗೆ ಮೂರು ಬಾರಿ ಕಚ್ಚಿದೆ. ತಂದೆ ನೀಡಿದ ಮದ್ದಿನಿಂದ ಬದುಕುಳಿದೆ' ಎನ್ನುತ್ತಾಳೆ.

ಮಗಳ ಉರಗ ಪ್ರೀತಿಯೇ ತಾಯಿಗೆ ದೊಡ್ಡ ತಲೆನೋವು. ಮಗಳು ಹಾವಿನೊಂದಿಗೆ ಆಡುವುದು ಬಿಟ್ಟು ಇತರೆ ಮಕ್ಕಳಂತೆ ಶಾಲೆಗೆ ಹೋಗಿ ಓದಲಿ ಎಂಬಾಸೆ ತಾಯಿಗೆ. ಆದರೆ ಈಕೆಗೆ ಹಾವುಗಳೊಂದಿಗೆ ಆಡುವುದನ್ನು ಬಿಟ್ಟು ಸ್ಕೂಲಿಗೆ ಹೋಗಲು ಸ್ವಲ್ಪವೂ ಇಷ್ಟವಿಲ್ಲವಂತೆ. ಸ್ಕೂಲ್ ಬ್ಯಾಗ್ ನಲ್ಲಿ ಹಾವನ್ನು ಇರಿಸಿಕೊಂಡು ಶಾಲೆಗೆ ಹೋಗಿದ್ದಕ್ಕೆ ಟೀಚರ್ ಈಕೆಯನ್ನು ಶಾಲೆಯಿಂದ ಹೊರಕಳಿಸಿದ್ದರಂತೆ. ಸದಾ ಹಾವುಗಳನ್ನು ಇರಿಸಿ ಕೊಂಡಿರುವುದರಿಂದ ಯಾವ ನೆಂಟರೂ ಇವರ ಮನೆಗೆ ಬರುವುದಿಲ್ಲ. ಹೀಗೆ ಮಗಳ ಉರಗ ಪ್ರೀತಿ ಮುಂದುವರಿದರೆ ಇವಳನ್ನು ಮುಂದೆ ಯಾರು ಮದುವೆ ಆಗುತ್ತಾರೆ ಎಂಬುದು ತಾಯಿಯ ಅಳಲು.

■ ವಿದ್ಯಾ ವಿ ಹಾಲಭಾವಿ